ಆ) 2004–05ನೇ ಸಾಲಿನ ಶಿವಮೊಗ್ಗ ತಾಲ್ಲೂಕಿನ ಶಿವಮೊಗ್ಗ ನಗರದಲ್ಲಿ 111 ಮನೆಗಳನ್ನು ವಾಂಬೇ ಯೋಜನೆಯಡಿ ನಿರ್ಮಿಸುವ ಗುರಿ ಹೊಂದಲಾಗಿದ್ದು, ಮನೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

ಇ) ಹೌದು.

ಈ) ಗುರುತಿಸಿರುವ ಕೊಳಚೆ ಪ್ರದೇಶಗಳ ವಿವರಗಳು ಕೆಳಕಂಡಂತೆ ಇದೆ.

ಶಿವಮೊಗ್ಗ ನಗರ:

(1) ಬೊಮ್ಮನ ಕಟ್ಟೆ, (2) ಮಂಜುನಾಥ ಬಡಾವಣೆ (3) ಅಶೋಕ ನಗರ ಕೆರೆ ಅಂಗಳ (4) ಹಳೇ ಮಂಡಳಿ (5) ಬಸವನಗುಡಿ ಬೋವಿ ಕಾಲೋನಿ.

ಹೊಸನಗರ ವಿಧಾನಸಭಾ ಕ್ಷೇತ್ರ:

(1) ಶಾಂತಿನಗರ (2) ಅಮೀರ್ ಅಹಮದ್ ಕಾಲೋನಿ, 2ನೇ ಹಂತ.

ಉ) ವಾಂಬೇ ಯೋಜನೆಯಡಿ 111 ಮನೆಗಳಿಗೆ ರೂ. 44.40 ಲಕ್ಷಗಳು ನಿರ್ಮಲ ಜ್ಯೋತಿ ಯೋಜನೆಯ 2ನೇ ಹಂತದ ಯೋಜನೆಯಡಿ ಅನುದಾನ ಬಿಡುಗಡೆಯಾಗಬೇಕಾಗಿರುತ್ತದೆ.

2490(2038) ಶ್ರೀ ಹಾಲಪ್ಪ ಹೆಚ್. (ಹೊಸನಗರ):–ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರ ಸರ್ಕಾರಿ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಮಹಿಳಾ ವೈದ್ಯರನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಗುತ್ತಿಗೆ ಆಧಾರದ ಮೇಲೆ ನೇಮಕವಾದ ವೈದ್ಯರ ಸಂಖ್ಯೆ ಎಷ್ಟು; ವಿವರ ನೀಡುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ. ಈ ಮೊದಲು ಕೆಲಸ ನಿರ್ವಹಿಸಿದ್ದ ಮಹಿಳಾ ವೈದ್ಯಾಧಿಕಾರಿಗಳು ಅನಧಿಕೃತ ಗೈರು ಹಾಜರಿ ಆಗಿರುತ್ತಾರೆ. ಬೇರೆ ಮಹಿಳಾ ವೈದ್ಯರನ್ನು ತುಂಬಲು ಕ್ರಮ ಕೈಗೊಳ್ಳಲಾಗಿದೆ.

ಆ) ಹೊಸನಗರ ಸರ್ಕಾರಿ ಆಸ್ಪತ್ರೆಯಲ್ಲಿ ಗುತ್ತಿಗ ಆಧಾರದ ಮೇಲೆ ನೇಮಕವಾದ ವೈದ್ಯರ ಸಂಖ್ಯೆ 2.

2492(3396) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿಗ್ರಾಮೀಣ):–ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹಾನಗರ ಮಹಾದೇವ ಜವಳಿ ಗಿರಣಿಯ ಭಾಗವಾದ ಗಿರಣಿ ಹಾಳ ಪ್ರದೇಶದಲ್ಲಿ ಕಳೆದ ನಲವತ್ತು ವರ್ಷಗಳಿಂದ ಸಾವಿರಾರು ಜನರು ದೀನದಲಿತರು, ಹಿಂದುಳಿದವರು ಗುಡಿಸಲುಗಳನ್ನು ಹಾಕಿಕೊಂಡು ವಾಸವಾಗಿರುವುದು ನಿಜವಲ್ಲವೇ;

ಆ) ವಾಸವಾಗಿರುವ ಪ್ರದೇಶವನ್ನು ಕೊಳಚೆ ಪ್ರದೇಶ ಎಂದು ಘೋಷಿಸಲಾಗಿದೆಯೇ;

ಇ) ಈ ಪ್ರದೇಶದ ಜನರಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆಯೇ;

ಈ) ವಿತರಿಸದೇ ಇದ್ದಲ್ಲಿ ಕಾರಣಗಳೇನು;

ಉ) ಯಾವಾಗ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗುವುದು?

ಶ್ರೀ ಅಂಜನಮೂರ್ತಿ (ವಸತಿ ಸಚಿವರು):

ಅ) ಗಿರಣಿ ಹಾಳ ಕೊಳಚೆ ಪ್ರದೇಶದಲ್ಲಿ ನಿವಾಸಿಗಳು ಸುಮಾರು 30 ವರ್ಷಗಳಿಂದ ವಾಸಿಸುತ್ತಿದ್ದಾರೆ.

ಆ) ಗಿರಿಣಿ ಹಾಳ ಪ್ರದೇಶವನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರ ಪ್ರಸ್ತಾವನೆ ಮೇರೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: HMA 316 MNI 76 ದಿನಾಂಕ: 31.08.1976ರಲ್ಲಿ ಅಧಿನಿಯಮ (3)ರನ್ವಯ ಅಂತಿಮವಾಗಿ ಘೋಷಣೆ ಹೊರಡಿಸಿದೆ.

ಇ) ಈ ಪ್ರದೇಶದ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ಇದುವರೆವಿಗೂ ವಿತರಿಸಿರುವುದಿಲ್ಲ. ಆದರೆ ಈ ಪ್ರದೇಶವು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಇರುವುದರಿಂದ ಮಹಾ ನಗರ ಪಾಲಿಕೆಯಿಂದ ಕೇವಲ ಪರಿಚಯ ಪತ್ರಗಳನ್ನು ಮಾತ್ರ ವಿತರಿಸಲಾಗುತ್ತಿದೆ.

ಈ) ಈ ಕೊಳಚೆ ಪ್ರದೇಶವು ಕರ್ನಾಟಕ ರಾಜ್ಯ ಜವಳಿ ಸಂಸ್ಥೆ (ಪ್ರೈವೇಟ್ ಲಿ., ಬೆಂಗಳೂರು) ಇವರ ಮಾಲೀಕತ್ವದಲ್ಲಿರುತ್ತದೆ. ಅಲ್ಲದೆ ಈವರೆವಿಗೂ ಯಾವುದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮಂಡಳಿಯಿಂದ ಹಕ್ಕು ಪತ್ರಗಳನ್ನು ವಿತರಿಸಲಾಗಿರುವುದಿಲ್ಲ. ಹಕ್ಕು ಪತ್ರ ವಿತರಣೆ ಬಗ್ಗೆ ಸರ್ಕಾರವು ದಿನಾಂಕ: 18.10.2004ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಭೂ ಒಡತನ ನೀಡುವ ಬಗ್ಗೆ ರೂಪರೇಷಗಳನ್ನು ಅಂತಿಮಗೊಳಿಸಲಾಗುತ್ತಿದೆ.

ಉ) ಸದರಿ ಪ್ರದೇಶವು ಕೆ.ಸಿ.ಟಿ. ಮಿಲ್‌ಗೆ ಸಂಬಂಧಿಸಿದ್ದು, ಈ ಪ್ರದೇಶವನ್ನು ಮಂಡಳಿಯ ಅಧಿನಿಯಮ 17ರ ಅಡಿಯಲ್ಲಿ ಭೂ ಸ್ವಾಧೀನ ಪಡಿಸಿಕೊಂಡಲ್ಲಿ ನಿಯಮಾನುಸಾರ ಹಕ್ಕುಪತ್ರಗಳನ್ನು ವಿತರಿಸಲು ಕ್ರಮ ವಹಿಸಲಾಗುವುದು.

2493(3255) ಶ್ರೀ ಐವಾನ್ ನೇಗ್ಲಿ (ನಾಮನಿರ್ದೇಶಿತರು):-ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶುಶ್ರೂಷಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ವಿಶ್ವವಿದ್ಯಾಲಯ ಪ್ರಾರಂಭಿಸುವ ಪ್ರಸ್ತಾವನೆ ಇದೆಯೇ;

ಆ) ಸರ್ಕಾರದಿಂದ ಶುಶ್ರೂಷಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಪ್ರಶಸ್ತಿಯನ್ನು ಅದರಲ್ಲೂ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುವ ಪ್ರಸ್ತಾವನೆ ಇದೆಯೆ;